ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಆರೋಗ್ಯ ಕೇಂದ್ರಗಳ ಅಭಿವೃದ್ಧಿ

4660 - ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಮತ್ತು ತಾಲ್ಲೂಕು ಆರೋಗ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯೋಚಿಸಿದೆಯೇ?

ಆ) ಈ ಯೋಜನೆಯನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು? ಈ ಯೋಜನೆಯ ಅಂದಾಜು ಮೊತ್ತ ಎಷ್ಟು?

ಇ) ಅಗತ್ಯ ಇರುವ ಹಣವನ್ನು ಯಾವ ಮೂಲಗಳಿಂದ ಪಡೆಯಲಾಗುವುದು?

ಡಾ. ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಯೋಜನೆಗಳು ಮುಂದುವರಿಯುವ ಕಾರ್ಯಕ್ರಮಗಳಾಗಿರುತ್ತವೆ. ವಿಶ್ವಬ್ಯಾಂಕ್ ನೆರವಿನ ಕೆಳಕಾಣಿಸಿದ ಮುಖ್ಯ ಯೋಜನೆಗಳು ಕಾರ್ಯಗತವಾಗುತ್ತಿವೆ.

1. ಕರ್ನಾಟಕ ಆರೋಗ್ಯ ವ್ಯವಸ್ಥೆಯ ಅಭಿವೃದ್ಧಿ ಯೋಜನೆ ಸಮುದಾಯ ಆರೋಗ್ಯ ಕೇಂದ್ರಗಳು ತಾಲ್ಲೂಕು ಆಸ್ಪತ್ರೆಗಳ ಅಭಿವೃದ್ಧಿಯನ್ನು ರೂ. 562.41 ಕೋಟಿ (ಜಿಲ್ಲಾ ಆಸ್ಪತ್ರೆಗಳು ಹಾಗೂ ಭೋದಕ ಆಸ್ಪತ್ರೆಗಳು).

2. ಭಾರತೀಯ ಜನಸಂಖ್ಯಾ ಯೋಜನೆ -VIII ರಡಿಯಲ್ಲಿ ಬೆಂಗಳೂರು ಪ್ರಾ.ಆ.ಕೆ.ಗಳು ಹಾಗೂ 11 ಇತರೆ ನಗರಗಳ ಒಟ್ಟು ಯೋಜನಾ ವೆಚ್ಚ ರೂ. 83.32 ಕೋಟಿಗಳು.

3. ಭಾರತೀಯ ಜನಸಂಖ್ಯಾ ಯೋಜನೆ-IX ರಡಿಯಲ್ಲಿ ಆರೋಗ್ಯ ಉಪಕೇಂದ್ರಗಳು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಭಿವೃದ್ಧಿಯನ್ನು ರೂ. 150.84 ಕೋಟಿಗಳು ಅಂದಾಜು ವೆಚ್ಚದಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ.

ಇದರ ಜೊತೆಗೆ ಈ ಕೆಳಕಾಣಿಸಿದ ಯೋಜನೆಗಳನ್ನು ರಾಜ್ಯ ಆಯವ್ಯಯ ಅವಕಾಶದಡಿ ಕಾರ್ಯಕತಗೊಳಿಸಲಾಗುತ್ತಿದೆ.

1. 1000 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪ್ರಯೋಗಾಲಯಗಳಿಗೆ ರೂ. 50.00 ಲಕ್ಷ ಮೊತ್ತದಲ್ಲಿ ಸಲಕರಣೆಗಳನ್ನು ಮಂಜೂರು ಮಾಡಿದೆ.

2. ಪ್ರಾ.ಆ. ಕೇಂದ್ರಗಳಿಗೆ ಇರುವ ರೂ. 50,000 ಮೊತ್ತದ ಔಷಧಿ ಖರೀದಿಗೆ ಇರುವ ಮೊತ್ತವನ್ನು ರೂ. 75.00 ಗಳಿಗೆ ಹೆಚ್ಚಿಸಲಾಗಿದೆ.

3. ಇದರ ಜೊತೆಗೆ ಪ್ರಾ.ಆ. ಕೇಂದ್ರಗಳು ಹಾಗೂ ಉಪಕೇಂದ್ರಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಧನ ಸಹಾಯದ ಪ್ರಧಾನ ಮಂತ್ರಿಗಳ ಗ್ರಾಮೋದಯ ಯೋಜನೆಯಡಿ ಒಟ್ಟು ರೂ. 11.27 ಕೋಟಿ ಮೊತ್ತದಲ್ಲಿ ಯೋಜನೆಯನ್ನು ಕೈಗೊಳ್ಳಲಾಗುತ್ತಿದೆ.

ಇ) ರಾಜ್ಯದ ಆಯವ್ಯಯ ಅವಕಾಶದಡಿಯಲ್ಲಿ ಹಾಗೂ ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ.

ರಾಜ್ಯದಲ್ಲಿ ಉಪಾಧ್ಯಾಯರ ಕೊರತೆಯ ವಿಚಾರ

4662 - ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರೌಢಶಾಲೆ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಕೊರತೆ ಇರುವ ಉಪಾಧ್ಯಾಯರ ಪಟ್ಟಿಯನ್ನು ಶಾಲಾವಾರು ನೀಡುವುದು?

ಆ) ಈ ಶಾಲೆಗಳಲ್ಲಿ ಎಷ್ಟು ವರ್ಷಗಳಿಂದ ಉಪನ್ಯಾಸಕರು ಮತ್ತು ಉಪಾಧ್ಯಾಯರ ಕೊರತೆ ಇದೆ, ಈ ಕೊರತೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಸರ್ಕಾರಿ ಪ್ರೌಢಶಾಲೆ — ಸರ್ಕಾರಿ ಪ್ರಾಥಮಿಕ ಶಾಲೆ

4198 — 15830

(ಶಾಲಾವಾರು ಪಟ್ಟಿ ಲಗತ್ತಿಸಿದೆ)

ಆ) ಪ್ರೌಢಶಾಲೆಗಳಲ್ಲಿನ ಶಿಕ್ಷಕರ ಖಾಲಿ ಹುದ್ದೆಗಳು ಕಳೆದ 2 ವರ್ಷಗಳಿಂದಲೂ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು ನವೆಂಬರ್ 99 ರಿಂದಲೂ ಖಾಲಿ ಇರುತ್ತವೆ. ಈ ಖಾಲಿ ಹುದ್ದೆಗಳನ್ನು ಪ್ರೌಢಶಾಲೆಗಳಲ್ಲಿ ಶೇ. 50ರಷ್ಟನ್ನು ಈಗಾಗಲೇ ಪ್ರಾಥಮಿಕ ಶಾಲಾ ಶಿಕ್ಷಕರು, ಪದವಿ ಮತ್ತು ಬಿ.ಎಡ್. ತರಬೇತಿ ಪಡೆದಿದ್ದಲ್ಲಿ ಬಡ್ತಿ ಕೊಡುವ ಮೂಲಕ ಭರ್ತಿ ಮಾಡಿದ್ದು ಉಳಿದ ಶೇ. 50ರಷ್ಟನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಗ್ರಾಮೀಣ ಕೃಪಾಂಕದ ಇತ್ಯರ್ಥ, ಇತ್ಯಾದಿಗಳು ತೀರ್ಮಾನಗೊಂಡ ನಂತರ ನೇರ ನೇಮಕಾತಿ ಮಾಡಕೊಳ್ಳುವ ಕ್ರಮ ಕೈಗೊಳ್ಳಲಾಗುವುದು.